ತೆಗೆದುಕೊಳ್ಳಬೇಕು. ಕಳೆದ ಬಾರಿ ಮಾನ್ಯ ಶ್ರೀನಿವಾಸಗೌಡರು ಕೃಷಿ ಸಚಿವರಾಗಿದ್ದಾಗಲೂ ನಾನು ಅವರಿಗೆ ಮನವಿ ಮಾಡಿದ್ದೆ, ಅವರ ಕಾಲದಲ್ಲೂ ಏಕೋ ವಿಳಂಬವಾಗಿದೆ. ತಾವು ವಿಳಂಬ ಮಾಡದೇ, ಕೂಡಲೇ ಇದನ್ನು ಪ್ರಾರಂಭ ಮಾಡಲು ಆದೇಶವನ್ನು ಮಾಡುವ ಸ್ವಸ್ಥವಾದ ಭರವಸೆಯನ್ನು ಕೊಡಬೇಕು ಎಂದು ತಮ್ಮ ಮುಖ್ಯಾಂತರ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ: ಮಾನ್ಯ ಅಧ್ಯಕ್ಷರೆ,ಗೌರವಾನ್ವಿತ ಸದಸ್ಯರು ಡಿಸ್ಟ್ರಿಕ್ಟ್ ಅಗ್ರಿಕಲ್ಚರ್ ಟ್ರೈನಿಂಗ್ ಸೆಂಟರ್ ಬೇಕು ಎಂದು ಈಗಾಗಲೇ ಕೇಳಿದ್ದಾರೆ. ಸಿಂಧಗಿ ತಾಲ್ಲೂಕಿನ ಅಲಮೇಲದಲ್ಲಿ ಒಂದು ಉಪ ಕೇಂದ್ರವಿದೆ. ಅದನ್ನು ಬಿಜಾಪುರಕ್ಕೆ ಸ್ಥಳಾಂತರ ಮಾಡುವ ಪ್ರಸ್ತಾಪ ಈಗಾಗಲೇ ಸರ್ಕಾರದ ಮುಂದಿದೆ. ಇದನ್ನು ಸ್ಥಳಾಂತರ ಮಾಡುವ ಕಾರಣವೇನೆಂದರೆ, ಬಿಜಾಪುರದಲ್ಲಿ ಅಗ್ರಿಕಲ್ಚರ್ ಕಾಲೇಜು ಇದೆ. ಆ ಕಾರಣದಿಂದಲಿ ಅಲ್ಲಿ ಸೈಂಟಿಸ್ಟ್‌ಗಳೆಲ್ಲಾ ಇರುತ್ತಾರೆ ಎನ್ನುವ ಕಾರಣದಿಂದ ಇದು ಸ್ಥಳಾಂತರವಾಗುತ್ತದೆ. ಸ್ಥಳಾಂತರವನ್ನು ತಕ್ಷಣ ಆರು ತಿಂಗಳೊಳಗೆ ಮಾಡಬೇಕೆಂದ್ದಿದ್ದೇವೆ. ಅದಕ್ಕೆ ಈಗಾಗಲೇ 20 ಲಕ್ಷ ರೂಪಾಯಿಗಳ ಫಂಡ್‌ಅನ್ನು ಒದಗಿಸಿದ್ದೇವೆ. ಹಾಗಾಗಿ ಈ ಟ್ರೈನಿಂಗ್ ಸೆಂಟರನ್ನು ಆರೇಳು ತಿಂಗಳ ಒಳಗಾಗಿ ಸ್ಥಾಳಾಂತರ ಮಾಡಿ ಪ್ರಾರಂಭ ಮಾಡಲು ಪ್ರಯತ್ನ ಪಡುತ್ತೇವೆ ಎಂದು ತಮ್ಮ ಮುಖಾಂತರ ಹೇಳುತ್ತೇನೆ.

ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆ ವಿಮೆ

51 (263) ಶ್ರೀ ಶಿವರಾಮು ಬಿ. (ಗಂಡಸಿ) ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2005–06ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆ ವಿಮೆಗಾಗಿ ರೈತರು ಕಟ್ಟಿರುವ ಒಟ್ಟು ಬೆಳೆ ಕಂತಿನ ಮೊತ್ತವೆಷ್ಟು;

ಆ) ಈವರೆಗೆ ಬೆಳೆ ವಿಮೆ ಮಂಜೂರಾತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳೆ ವಿಮಾ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ 2005ರ ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಗೆ ಒಟ್ಟು 53373 ರೈತರು ರೂ. 11.44 ಕೋಟಿಗಳನ್ನು ವಿಮಾ ಕಂತನ್ನು ಪಾವತಿಸಿ ಭಾಗವಹಿಸಿರುತ್ತಾರೆ.

ಆ) ಬಂದಿದೆ.

ಇ) ಹಾಸನ ಜಿಲ್ಲೆಯ 2005ರ ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಯ ಹೋಬಳಿವಾರು ಇಳುವರಿ ಮಾಹಿತಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಅಗ್ರಿಕಲ್ಚರ್ ಇನ್ಸೂರೆನ್ಸ್ ಆಫ್ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ಈಗಾಗಲೇ ನೀಡಿದೆ. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕುತ್ತಿದೆ. ವಿಮಾ ಸಂಸ್ಥೆಯು ರಾಜ್ಯ ಸರ್ಕಾರದ ಪಾಲಿನ ಹಣವನ್ನು

ಬಿಡುಗಡೆ ಮಾಡಲು ಕೋರಿದ ತಕ್ಷಣ ಹಣವನ್ನು ಬಿಡುಗಡೆಮಾಡಿ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಗೆ ಒಟ್ಟು 53.373 ಜನ ರೈತರು, 11.44 ಕೋಟಿ ರೂಪಾಯಿಗಳ ವಿಮಾ ಕಂತನ್ನು ತುಂಬಿದ್ದಾರೆ. ಆದರೆ ಬೆಳೆ ವಿಮೆ ಈವರೆಗೆ ಮಂಜೂರಾತಿಯಾಗಿಲ್ಲ ಎನ್ನುವುದು ನನಗೂ ತಿಳಿದಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಎನ್ನುವುದು ನನ್ನ ಮೂಲಭೂತ ಪ್ರಶ್ನೆ. ಬೆಳೆಯನ್ನು ತೆಗೆದು 6–7 ತಿಂಗಳಾಯಿತು. ಬೆಳೆ ಇರುವಾಗಲೇ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಹಿತಿಯನ್ನು ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್ ಮೂಲಕ ಇನ್‌ಷೂರೆನ್ಸ್ ಕಾರ್ಪೋರೇಷನ್ ಕಂಪನಿಗೆ ಕಳುಹಿಸಲಾಗಿದೆ. ಬೆಳೆ ವಿಮೆಯನ್ನು ಕೊಡಲು ಎಷ್ಟು ದಿವಸ ಬೇಕು? ನಾನು ಇದನ್ನು ತಮಗೆ ಏಕೆ ಕೇಳುತ್ತಿದ್ದೇನೆಂದರೆ, ಇದಕ್ಕೆ ಏನಾದರೊಂದು ಟೈಂ ಬೌಂಡ್ ಪ್ರೋಗ್ರಾಂ, ಅಂದರೆ ಮಾಹಿತಿಯನ್ನು ಒದಗಿಸಿ ನಂತರ ಇಷ್ಟು ದಿವಸಗಳೊಳಗೆ ಕಂಪನಿಯವರು ನಷ್ಟವನ್ನು ಅಂದಾಜು ಮಾಡಿ, ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ತುಂಬಲಿಕ್ಕೆ ಕೋರಿಕೆಯನ್ನು ಮಾಡಬೇಕು ಮತ್ತು ಪರಿಹಾರವನ್ನು ಕೊಡಬೇಕೆಂದು ಕಾರ್ಯಕ್ರಮ ಮಾಡುವಿರಾ? ಹಿಂದಿನದನ್ನು ನಾನು ಈಗ ಹೇಳುತ್ತಿದ್ದೇನೆ, 2004–05ನೇ ಸಾಲಿನದ್ದು ಈಗ ಚೆಕ್ ಬಂದಿದೆ. ಅವರಿಗೆ ಏಕೆ ಇಷ್ಟು ಕಾಲಾವಕಾಶ ಬೇಕಾಗುತ್ತದೆ. ನನ್ನ ಬಳಿ ಇರುವ ಮಾಹಿತಿ ಪ್ರಕಾರ, ಹಾಸನ ಜಿಲ್ಲೆಯ ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್‌ನಿಂದ ಮಾಹಿತಿ ಹೋಗಿ ಆರು ತಿಂಗಳಾಗಿದೆ. ಆದರೂ, ಏಕೆ ವಿಳಂಬವಾಗುತ್ತಿದೆ? ಸರ್ಕಾರದ ವತಿಯಿಂದ ತಾವೇನಾದರೂ ಒಂದು ಟೈಂ ಬೌಂಡ್ ಪ್ರೋಗ್ರಾಂ ಅನ್ನು ಮಾಡುವಿರಾ? ಮಾಹಿತಿ ಕಳುಹಿಸಿದ ಇಷ್ಟು ದಿವಸಗಳೊಳಗೆ , ಆಂದಾಜಿನ ಮೊತ್ತ ಎಷ್ಟು ಎಂದು ಸರ್ಕಾರ ಕೇಳತಕ್ಕಂಥ ಟೈಂ ಬೌಂಡ್ ಪ್ರೋಗ್ರಾಂ ನೀತಿಯನ್ನು ಜಾರಿಗೆ ತರತಕ್ಕಂಥ ಕ್ರಮವನ್ನು ಕೈಗೊಳ್ಳುವಿರೇ?

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಿರಿಯ ಸದಸ್ಯರು ಹೇಳಿದ ಹಾಗೆ ಹಣ ಬಿಡುಗಡೆಯಾಗುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ಕೆಲವು ಡಿಸ್ಟ್ರಿಕ್ಟ್‌ಗಳಿಂದ ಮಾಹಿತಿ ಸ್ಟಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಿ ಅಲ್ಲಿಂದ ಇನ್‌ಷೂರೆನ್ಸ್ ಕಂಪನಿಗೆ ಕಳುಹಿಸಿ ಅಲಿಂದ ರೈತರಿಗೆ ಹಣ ಬರುವಷ್ಟರಲ್ಲಿ ಬಹಳ ವಿಳಂಬವಾಗುತ್ತಿದೆ. ಆದರೆ ತಮ್ಮ ಹಾಸನ ಜಿಲ್ಲೆಯಿಂದ ಎಲ್ಲಾ ಮಾಹಿತಿ ಈಗಾಗಲೇ ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನಿಂದ ಅಗ್ರಿಕಲ್ಚರಲ್, ಕಾರ್ಪೋರೇಷನ್ನಿಗೆ ಹೋಗಿದೆ. ನನಗೆ ಬಂದಿರುವ ಮಾಹಿತಿ ಪ್ರಕಾರ ಏಪ್ರಿಲ್ ಎಂಡ್ ಅಥವಾ ಮೇ ಫಸ್ಟ್ ವೀಕ್‌ನಲ್ಲಿ ಹಣ ಬಿಡುಗಡೆ ಮಾಡುತ್ತಿದ್ದೇವೆ. ತಾವು ಹೇಳಿದ ಹಾಗೆ ಇದರ ಬಗ್ಗೆ ನಾವು ಚರ್ಚೆ ಮಾಡಿ ಸಂಬಂಧಪಟ್ಟ ಅಗ್ರಿಕಲ್ಚರಲ್ ಕಾರ್ಪೋರೇಷನ್ನಿನವರಿಗೆ ಹೇಳುತ್ತೇವೆ. ಇದು ಸೆಂಟ್ರಲ್ ಗವರ್ನಮೆಂಟ್‌ದ್ದು ಆಗಿರುವುದರಿಂದ ಅವರ ಜೊತೆ ಮಾತನಾಡಿ ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಶಿವರಾಮು : ನಿಮಗೆ ಮಾತನಾಡಲು ಅವಕಾಶವಿದೆ. ಆದ್ದರಿಂದ, ಮಾತನಾಡಿ ಏನಾದರೊಂದು ನೀತಿಯನ್ನು ರೂಪಿಸತಕ್ಕಂಥ ವ್ಯವಸ್ಥೆಯಾಗಬೇಕು. 53.373 ರೈತ ಕುಟುಂಬದವರು ಈ ಹಣ ಬರುತ್ತದೆ, ಬರುತ್ತದೆ ಎನ್ನವ ನಿರೀಕ್ಷೆಯಲ್ಲಿಯೇ ಇದ್ದಾರೆ. ಮತ್ತೆ ಈಗಾಗಲೇ ಆಲೂಗೆಡ್ಡೆ ಬಿತ್ತನೆ ಕಾಲ ಪ್ರಾರಂಭವಾಗಿದೆ. ಇನ್ನೂ ಅವರಿಗೆ ಹಣ ಸಿಗುವುದಿಲ್ಲವೆಂದರೆ ಹೇಗೆ? ನಮ್ಮ ಜಿಲ್ಲೆಯಿಂದ ಸುಮಾರು ಹನ್ನೊಂದೂವರೆ ಕೋಟಿ ರೂಪಾಯಿಗಳ ರೈತರ ಹಣ ಸರ್ಕಾರದಲ್ಲಿ ಇರುವಾಗ, ಅವರ ಆತಂಕವನ್ನು ನಾವು ಅರ್ಥಮಾಡಿಕೊಂಡು, ಅದಕ್ಕೆ ಸ್ಪಂದಿಸತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ ತಮ್ಮ ಕಾಲದಲ್ಲಾದರೂ ಒಂದು ಟ್ಯೆಂ ಬೌಂಡ್ ಪ್ರೋಗ್ರಾಂಅನ್ನು ನಿಗದಿ ಮಾಡುವುದರ ಮುಖಾಂತರ ರೈತರ ಆತಂಕವನ್ನು ಬಗೆಹರಿಸಬೇಕು ಎಂದು ಅಧ್ಯಕ್ಷರ ಮೂಲಕ ತಮಗೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದುದ್ದರಲ್ಲಿ ಬಹಳ ಅರ್ಥವಿದೆ. ಆದರ ಬಗ್ಗೆ ಪರಿಶೀಲನೆಯನ್ನು ಮಾಡಿ ಮುಂದಿನ ದಿನಗಳಲ್ಲಿ ಕ್ರಮವನ್ನು ಕೈಗೊಳ್ಳುತ್ತೇವೆ.

ತುರುವೇಕೆರೆ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಗೋದಾಮುಗಳನ್ನು ನಿರ್ಮಿಸುವುದು

52 (37) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಕೃಷಿ ಮಾರುಕಟ್ಟೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಗೋದಾಮುಗಳು ಇಲ್ಲದೇ ರೈತರು ಬೆಳೆದ ಉತ್ಪನ್ನಗಳನ್ನು ಸಂರಕ್ಷಿಸಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಗೋದಾಮುಗಳನ್ನು ನಿರ್ಮಾಣ ಮಾಡಿ ರೈತರ ಉತ್ಪನ್ನಗಳನ್ನು ಸಂರಕ್ಷಿಸಲು ಅನುಕೂಲ ಮಾಡಿಕೊಡಲಾಗುವುದೇ;

ಇ. ಹಾಗಿದ್ದಲ್ಲಿ ಯಾವಾಗ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪೂರ (ಕೃಷಿ ಮಾರುಕಟ್ಟೆ ಸಚಿವರು):

ಅ. ಇಲ್ಲ.

ಆ. – ಪ್ರಶ್ನೆ ಉದ್ಭವಿಸುವಿದಿಲ್ಲ –

ಇ. – ಪ್ರಶ್ನೆ ಉದ್ಭವಿಸುವಿದಿಲ್ಲ –

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ತುರುವೇಕೆರೆ ತಾಲ್ಲೋಕಿನಲ್ಲಿ ಒಂದು ಗೋದಾಮನ್ನು ನಿರ್ಮಾಣ ಮಾಡಬೇಕು ಎಂದು ಹಿಂದೆ ಬಹಳ ಸಾರಿ ನಾನು ಸರ್ಕಾರವನ್ನು ಒತ್ತಾಯ ಮಾಡಿದ್ದೇನೆ. ಅದಕ್ಕೆ ಪೂರಕವಾಗಿ ಜಮೀನು ಕೊಡಬೇಕು ಎಂದು ನಾವು ಆರ್,ಎಂ,ಸಿ,ಗೆ.